## ಸಂಪಾದಕೀಯ

# ಯಾವುದು ಸತ್ಯ?

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋಽರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥

"ಅಸತ್ಯವಾದುದುದಕ್ಕೆ ಇರುವಿಕೆ ಇಲ್ಲ. ಸತ್ಯವಾದುದಕ್ಕೆ ಇಲ್ಲದಿರುವಿಕೆ ಇಲ್ಲ. ಇವೆರಡರ ಸ್ವರೂಪವನ್ನು ತತ್ತ್ವದರ್ಶಿಗಳು ನೋಡಿರುತ್ತಾರೆ."[೧]

ಇಲ್ಲಿ ಯಾವುದು ಸತ್ಯ, ಯಾವುದು ಅಸತ್ಯ ಎಂಬ ವಿಚಾರವು ಚರ್ಚಿಸಲ್ಪಟ್ಟಿದೆ. ಶ್ರೀಕೃಷ್ಣನ ಪ್ರಕಾರ ಯಾವಾಗಲೂ ಇರುವಂತಹುದು ಸತ್ಯ. ಅಂದರೆ ಶಾಶ್ವತವಾದುದೇ ಸತ್ಯ. ಅಶಾಶ್ವತ ಸತ್ಯ ಎನ್ನುವುದು ಇನ್ನೊಂದಿಲ್ಲ. ಅಬಾಧಿತವಾದುದು ಯಾವುದೋ ಅದು ಸತ್ಯ. ಶ್ರೀಶಂಕರಾಚಾರ್ಯರು ಹೇಳುತ್ತಾರೆ: **ಯದ್ವಿಷಯಾ ಬುದ್ಧಿಃ ನ ವ್ಯಭಿಚರತಿ ತತ್ ಸತ್, ಯದ್ವಿಷಯಾ ಬುದ್ಧಿಃ ವ್ಯಭಿಚರತಿ, ತತ್ ಅಸತ್** –"ಯಾವ ವಿಷಯಕ್ಕೆ ಸಂಬಂಧಿಸಿದ ಬುದ್ಧಿಯು ಬದಲಾಗುತ್ತದೆಯೋ, ಅದು ಅಸತ್ಯ. ಯಾವ ವಿಷಯಕ್ಕೆ ಸಂಬಂಧಿಸಿದ ಬುದ್ಧಿಯು ಬದಲಾಗುವುದಿಲ್ಲವೋ ಅದು ಸತ್ಯ. ಈ ರೀತಿ ಸತ್–ಅಸತ್ ವಿಭಾಗವು ಬುದ್ಧಿಯನ್ನು ಅವಲಂಬಿಸಿರುತ್ತದೆ." [೨]

ಈ ಪ್ರಪಂಚದಲ್ಲಿ, ನಾವು ಇಂದ್ರಿಯಗಳ ಮೂಲಕ ಅನುಭವಿಸುವ ಎಲ್ಲ ವಸ್ತುಗಳೂ ಬದಲಾಗುತ್ತಿವೆ. ನಾವು ಈಗ ಅನುಭವಿಸಿದ ವಿಷಯವನ್ನು ಮುಂದಿನ ಕ್ಷಣದಲ್ಲಿ ಅನುಭವಿಸಲಾಗುವುದಿಲ್ಲ. ಎಲ್ಲವೂ ನಿರಂತರವಾಗಿ ಬದಲಾಗುತ್ತಿರುತ್ತವೆ. ಎಷ್ಟೋ ವಸ್ತುಗಳ ಬದಲಾವಣೆ ನಮ್ಮ ಗಮನಕ್ಕೆ ಬರದೇ ಇರಬಹುದು. ಬಹಳ ಸಮಯದ ನಂತರ ಅವುಗಳ ಬದಲಾವಣೆ ನಮ್ಮ ಗಮನಕ್ಕೆ ಬರಬಹುದು. ಆದರೆ, ಇದ್ದಕ್ಕಿದ್ದಂತೆಯೇ ಯಾವುದೂ ಬದಲಾಗುವುದಿಲ್ಲ– ಬದಲಾವಣೆಯೆಂಬುದು ಸತತವಾಗಿ ನಡೆಯುವ ಪ್ರಕ್ರಿಯೆ. ಆದ್ದರಿಂದ, ವಸ್ತುವು ಕ್ಷಣಕ್ಷಣಕ್ಕೆ ಬದಲಾಗುತ್ತಿರುತ್ತದೆ. ಹಾಗೆಯೇ, ವಸ್ತುವಿನ ಪ್ರತಿಯೊಂದು ಕಣವೂ ಬದಲಾಗುತ್ತಿರುತ್ತದೆ. ಆದ್ದರಿಂದ ವಸ್ತುವಿನ ಕಣಕಣವೂ ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತದೆ. ಅದಕ್ಕಾಗಿಯೇ, ನಾವು ಒಂದೇ ವಸ್ತುವನ್ನು ಎರಡು ಬಾರಿ ನೋಡಲಾಗುವುದಿಲ್ಲ. ನಾವು ಸಮಾನ ವಸ್ತುವನ್ನು ನೋಡುತ್ತೇವೆಯೇ ಹೊರತು, ಒಂದೇ ವಸ್ತುವನ್ನಲ್ಲ.

ಕ್ಷಣಕ್ಷಣಕ್ಕೂ ಬದಲಾಗುವುದರಿಂದ ಯಾವ ವಸ್ತುವಿನ ಬಗ್ಗೆಯಾಗಲಿ, ಮನಸ್ಸಿನ ಬಗ್ಗೆಯಾಗಲಿ ಇದು ಸತ್ಯ ಎಂದು ನಿರ್ದೇಶಿಸಿ ಹೇಳಲಾಗುವುದಿಲ್ಲ. ಆದ್ದರಿಂದಲೇ ಶ್ರೀಶಂಕರಾಚಾರ್ಯರು ಹೀಗೆ ಹೇಳುತ್ತಾರೆ: **ಸರ್ವೋ ವಿಕಾರಃ ಕಾರಣ ವ್ಯತಿರೇಕೇಣ ಅನುಪಲಬ್ಧೇಃ ಅಸತ್** – "ಎಲ್ಲ ಬಗೆಯ ವಿಕಾರಗಳೂ ಕಾರಣಕ್ಕೆ ಭಿನ್ನವಾಗಿ ಲಭ್ಯವಾಗುವುದಿಲ್ಲ."[೩] ಮಣ್ಣಿನಿಂದಾದ ಮಡಕೆ ಕುಡಿಕೆಗಳನ್ನು ಮಣ್ಣಿನಿಂದ ಬೇರೆಯಾಗಿ ಮಾಡಿ ನೋಡಲಾಗುವುದಿಲ್ಲ. ಅವುಗಳಲ್ಲಿ ಸತ್ಯವಾದುದು ಮಣ್ಣು ಮಾತ್ರವೇ (**ಮೃತ್ತಿಕೇತ್ಯೇವ ಸತ್ಯಂ**). ಆದರೆ ಮಣ್ಣೂ ಕೂಡ ವಿಕಾರವೇ. ಅದಕ್ಕೆ ಕಾರಣವಾದ ಪರಮಾಣುಗಳೂ ವಿಕಾರಗಳೇ. ಹೀಗೆ ನಾವು ವಿಶ್ಲೇಷಿಸುತ್ತ ಹೋದರೆ, ಈ ಎಲ್ಲ ಅನುಭವಗಳಿಗೆ ಕಾರಣವಾದ ಸಾಕ್ಷಿ ಚೈತನ್ಯವೊಂದೇ ಸತ್ಯವಾಗಿ ಉಳಿಯುತ್ತದೆ. ಅದೇ ಎಲ್ಲದಕ್ಕೂ ಸತ್ಯತೆಯನ್ನು ನೀಡುವಂತಹುದು. ಆದ್ದರಿಂದಲೇ ಮಡಕೆ ಇದೆ, ಬಟ್ಟೆ ಇದೆ, ಪುಸ್ತಕ ಇದೆ ಎಂಬ ಅಸ್ತಿತ್ವ ಭಾವ ಎಲ್ಲ ವಿಷಯಗಳಲ್ಲಿಯೂ ಇದೆ. ವಿಷಯಗಳು ಬದಲಾವಣೆಯಾದರೂ ಈ ಅಸ್ತಿತ್ವಭಾವ ಬದಲಾಗುವುದಿಲ್ಲ. ಇದೇ ಎಲ್ಲದರ ಹಿಂದಿರುವ ಸತ್ಯ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಅಸ್ತಿತ್ವವೇ ಆತ್ಯಂತಿಕ ಸಾಮಾನ್ಯೀಕರಣ"(Existence is the highest generalization).

> **ಯಾವುದು ಸತ್ಯ?**
>
> **ಏಕರೂಪೇಣ ಹಿ ಅವಸ್ಥಿತಃ ಯೋಽರ್ಥಃ ಸ ಪರಾಮರ್ಥಃ, ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ ಜ್ಞಾನಂ ಇತ್ಯುಚ್ಯತೇ**
> (ಬ್ರಹ್ಮಸೂತ್ರ ಭಾಷ್ಯ, ೨–೧–೧೧)
>
> ಯಾವ ವಸ್ತುವು ಒಂದೇ ರೂಪದಲ್ಲಿ ಇರುತ್ತದೆಯೋ ಅದೇ ಪರಮಾರ್ಥ ವಸ್ತುವು. ಅದರ ಬಗೆಗಿನ ಜ್ಞಾನವನ್ನೇ ಪ್ರಪಂಚದಲ್ಲಿ ಸಮ್ಯಗ್‌ಜ್ಞಾನ (ಪರಿಶುದ್ಧ ಜ್ಞಾನ) ಎಂದು ಕರೆಯುತ್ತಾರೆ.
>
> **ಸತ್ಯಮಿತಿ ಯದ್ರೂಪೇಣ ಯನ್ನಿಶ್ಚಿತಂ, ತದ್ರೂಪಂ ನ ವ್ಯಭಿಚರತಿ ತತ್ ಸತ್ಯಂ** (ತೈತ್ತಿರೀಯ ಉಪನಿಷದ್ ಭಾಷ್ಯ, ೨–೧)
>
> ಸತ್ಯವೆಂದು ಯಾವ ವಸ್ತುವಿನ ರೂಪವನ್ನು ನಿಶ್ಚಯಿಸಿರುತ್ತೇವೆಯೋ ಅದು ಅದರ ರೂಪವನ್ನು ಎಂದಿಗೂ ಬಿಟ್ಟುಕೊಡದಿದ್ದರೆ ಮಾತ್ರ ಅದನ್ನು ನಿಜವಾಗಿಯೂ ಸತ್ಯವೆಂದು ಪರಿಗಣಿಸಬಹುದು.
>
> –ಶ್ರೀಶಂಕರಾಚಾರ್ಯರು

ಆದರೆ, ಈ 'ಅಸ್ತಿತ್ವ' ಎನ್ನುವುದು ಕೇವಲ ಮನಸ್ಸಿನ ಸೂಕ್ಷ್ಮಭಾವನೆ (mental abstraction) ಅಲ್ಲವೇ ಎಂಬ ಸಂಶಯ ಬರುತ್ತದೆ. ವಸ್ತುವಿನಿಂದ ಬೇರೆಯಾಗಿ ಅದಕ್ಕೆ ಸತ್ಯತೆ ಇದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಯಾವ ವಸ್ತುವೂ ಇಲ್ಲದಿರುವಾಗ, ಇಡಿ ಪ್ರಪಂಚವೇ ಇಲ್ಲದಿರುವಾಗ, ಉದಾಹರಣೆಗೆ ಸುಷುಪ್ತಿಯಲ್ಲಿ, ಯಾವ ಅಸ್ತಿತ್ವದ ಭಾವನೆಯೂ ಇರುವುದಿಲ್ಲ. ಆದರೂ ಅಲ್ಲಿ ಅಭಾವಪ್ರಜ್ಞೆ ಇರುತ್ತದೆ. ಅಭಾವವಿತ್ತು ಎಂಬ ಅಸ್ತಿತ್ವಭಾವ ಇರುತ್ತದೆ. ಅದರಿಂದ, ಅಸ್ತಿತ್ವಭಾವನೆಗೆ ಯಾವಾಗಲೂ ಚ್ಯುತಿ ಉಂಟಾಗುವುದಿಲ್ಲ. ಈ ಅಸ್ತಿತ್ವಭಾವನೆ ಒಂದು ಶಾಶ್ವತ ಸತ್ಯವನ್ನು ಸೂಚಿಸುತ್ತದೆ. ಅದನ್ನು ಆತ್ಮ, ಬ್ರಹ್ಮ, ಈಶ್ವರ ಎಂಬ ಯಾವುದೇ ಹೆಸರಿನಿಂದ ಕರೆಯಬಹುದು. ಅದೇ ವಿಷಯ ಮತ್ತು ವಿಷಯಿ– ಈ ದ್ವಂದ್ವದ ಹಿಂದಿರುವ ಸತ್ಯ. ದೃಕ್ ಮತ್ತು ದೃಶ್ಯ ಎರಡೂ ಸಾಪೇಕ್ಷ. ದೃಶ್ಯ ಸಂಪೂರ್ಣ ಕಣ್ಮರೆಯಾದಾಗ, ದೃಕ್‌ಪ್ರಜ್ಞೆಯೂ ಇರುವುದಿಲ್ಲ (subjective consciousness). ಆ ಸತ್ಯ ತ್ರಿಪುಟಿ ಭೇದವನ್ನು ಮೀರಿರುವುದು. ತ್ರಿಪುಟಿ ಎಂದರೆ, **ಜ್ಞಾತೃ**–ತಿಳಿಯುವವನು, **ಜ್ಞೇಯ**–ತಿಳಿಯಲ್ಪಡುವ ವಸ್ತು, **ಜ್ಞಾನ**–ವಸ್ತುವಿನ ಅರಿವು. ಆದ್ದರಿಂದ, ಅದನ್ನು **ಜ್ಞಾನಮಾತ್ರಂ** ಎಂದು ವಿವರಿಸಲಾಗಿದೆ.

ಒಂದು ವಸ್ತುವಿನಲ್ಲಿ ಯಾವುದು ಸತ್ಯವಾದ ಅಂಶ? ನಮ್ಮ ಅನುಭವಕ್ಕೆ

> ನಮ್ಮ ಇಂದ್ರಿಯಗಳಿಗೆ ಹೇಗೆ ಗ್ರಾಹ್ಯವಾಗುತ್ತವೆಯೋ ಅದನ್ನು ಬಿಟ್ಟು, ವಸ್ತುಗಳು ತಾವೇತಾವಾಗಿ ಯಾವ ಸ್ವರೂಪವುಳ್ಳವು ಎಂಬುದು ನಮಗೆ ತಿಳಿದೇ ಇಲ್ಲ. ಅವುಗಳನ್ನು ನೋಡುವ ವಿಧಾನಕ್ಕಿಂತ ಮಿಗಿಲಾಗಿ ನಮಗೆ ಅವುಗಳ ಬಗ್ಗೆ ಏನೂ ಗೊತ್ತಿಲ್ಲ. ಆ ವಿಧಾನವಾದರೋ ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟವಾದ ವಿಧಾನವಾಗಿದೆ. ಒಂದೇ ರೀತಿಯಲ್ಲಿ ಈ ಜಗತ್ತಿನ ಎಲ್ಲ ಜೀವಜಂತುಗಳು, ಅದರಲ್ಲೂ ಎಲ್ಲ ಮಾನವರು, ವಸ್ತುಗಳನ್ನು ಗ್ರಹಿಸುತ್ತಾರೆ ಎಂದು ಹೇಳಲಾಗುವುದಿಲ್ಲ... (ಸಾಧಾರಣ ಅರ್ಥದಲ್ಲಿ) 'ತಿಳಿದುಕೊಳ್ಳುವುದು' ಎನ್ನುವುದು ಇಂದ್ರಿಯಗ್ರಾಹಕತೆಯ ಪರಿಧಿಯನ್ನು ದಾಟಿ ಹೋಗಲಾರದು.
>
> – **ಇಮ್ಯಾನುಯಲ್ ಕ್ಯಾಂಟ್** (ಜರ್ಮನ್ ತತ್ತ್ವಶಾಸ್ತ್ರಜ್ಞ)

ಬರುವುದೆಲ್ಲ ಕೇವಲ ಗುಣಗಳು. ಒಂದು ಮೇಜನ್ನು ನೋಡಿದಾಗ ಅದರ ಆಕಾರ, ಬಣ್ಣ, ವಾಸನೆ ಮುಂತಾದವುಗಳು ನಮ್ಮ ಅನುಭವಕ್ಕೆ ಬರುತ್ತವೆ. ಇವೆಲ್ಲವೂ ನಿರಂತರ ಬದಲಾಗುವ ಮತ್ತು ಇಂದ್ರಿಯಗಳನ್ನು ಅವಲಂಬಿಸಿರುವ ಗುಣಗಳು. ಈ ಗುಣಗಳಿಂದ ಬೇರೆಯಾದ 'ಮೇಜು' ಎನ್ನುವ ಮೂಲವಸ್ತು (substance) ನಮಗೆ ದೊರೆಯುವುದೇ ಇಲ್ಲ. ಮೇಜು ಮರದಿಂದ ತಯಾರಿಸಲ್ಪಟ್ಟಿದ್ದರೆ, ಆ ಮರವನ್ನು 'ಗುಣಿ' ಎಂದು ಕರೆಯೋಣವೆಂದರೆ, ಅದೂ ಗುಣಗಳ ಮೊತ್ತವಾಗಿದೆಯೆಂಬುದು ನಮ್ಮ ಅನುಭವಕ್ಕೆ ಬರುತ್ತದೆ. ಹೀಗೆ ನಿಜವಾದ ಗುಣಿ ಯಾವುದು ಎಂದು ನಾವು ವಿಶ್ಲೇಷಿಸುತ್ತ ಹೋದರೆ, ನಾವು ನಮ್ಮ ಇಂದ್ರಿಯಾನುಭವವನ್ನು ಮೀರಿ ಹೋಗಬೇಕಾಗುತ್ತದೆ. ಅದಕ್ಕಾಗಿಯೇ, ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

> "ನಿಮ್ಮ ಎದುರಿಗಿರುವ ಯಾವುದಾದರೂ ಒಂದು ವಸ್ತುವನ್ನು ತೆಗೆದುಕೊಳ್ಳಿ. ತುಂಬ ಸ್ಥೂಲವಾಗಿರುವುದನ್ನು ಬೇಕಾದರೆ ತೆಗೆದುಕೊಳ್ಳಿ; ರಸಾಯನ ಶಾಸ್ತ್ರವನ್ನೇ ತೆಗೆದುಕೊಳ್ಳಿ, ಭೌತಶಾಸ್ತ್ರವನ್ನೇ ತೆಗೆದುಕೊಳ್ಳಿ, ಖಗೋಳಶಾಸ್ತ್ರವನ್ನೇ ತೆಗೆದುಕೊಳ್ಳಿ ಅಥವಾ ಜೀವವಿಜ್ಞಾನವನ್ನೇ ತೆಗೆದುಕೊಳ್ಳಿ. ಅದನ್ನು ವಿಶ್ಲೇಷಣೆ ಮಾಡಿ ತಿಳಿದುಕೊಳ್ಳುತ್ತ ಮುಂದೆ ಮುಂದೆ ಹೋಗಿ. ಅದರ ಸ್ಥೂಲವಾದ ಆಕಾರ ಮೊದಲು ಮಾಯವಾಗುತ್ತ ಬರುತ್ತದೆ. ಅನಂತರ ಸೂಕ್ಷ್ಮ ಸೂಕ್ಷ್ಮವಾಗುತ್ತ ಬರುತ್ತದೆ. ಅಂತೂ ನಾವು ಭೌತಿಕ ಪ್ರಪಂಚದಿಂದ ಭೌತಾತೀತ ಪ್ರಪಂಚಕ್ಕೆ ಹಾರಬೇಕಾದ ಸಮಯ ಬರುತ್ತದೆ. ಸ್ಥೂಲವು ಸೂಕ್ಷ್ಮದಲ್ಲಿ ಪರ್ಯವಸಾನವಾಗುತ್ತದೆ. ಭೌತಶಾಸ್ತ್ರವು ತತ್ತ್ವಶಾಸ್ತ್ರದಲ್ಲಿ (metaphysics) ಪರ್ಯವಸಾನವಾಗಬೇಕಾಗುತ್ತದೆ. ಪ್ರತಿಯೊಂದು ಜ್ಞಾನಕ್ಷೇತ್ರದಲ್ಲಿಯೂ ಹೀಗೆಯೇ."[೬]

ನಮ್ಮ ಸಾಮಾನ್ಯ ದೃಷ್ಟಿಗೆ ಸ್ಥೂಲವೊಂದೇ ಸತ್ಯವಾಗಿ ಕಂಡುಬರುತ್ತದೆ. ಆದರೆ, ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಸ್ಥೂಲಕ್ಕಿಂತ ಸೂಕ್ಷ್ಮವೇ ಹೆಚ್ಚು ಸತ್ಯವಾಗಿ ಕಂಡುಬರುತ್ತದೆ. ಒಂದು ಮೇಜು ನಮಗೆ ಸತ್ಯವಾಗಿ ಕಂಡುಬರುತ್ತದೆ. ಆದರೆ, ಮೇಜಿನ ಉಪಯುಕ್ತತೆ ನಮ್ಮ ಪಾಲಿಗೆ ಹೆಚ್ಚು ಸತ್ಯ ಮತ್ತು ಈ 'ಉಪಯುಕ್ತತೆ' ಎನ್ನುವುದು ಒಂದು ಅಮೂರ್ತ ಭಾವನೆ (abstract idea). ನಾವು ಒಂದು ಉಪನ್ಯಾಸವನ್ನು ಕೇಳುವಾಗ, ಸ್ಥೂಲವಾದ ಧ್ವನಿ ನಮಗೆ ಮೊದಲು ಸತ್ಯವಾಗಿ ಕಂಡುಬರುತ್ತದೆ. ಮುಂದೆ ಉಪನ್ಯಾಸದಲ್ಲಿ ತಲ್ಲೀನರಾದಾಗ, ಧ್ವನಿಯು ಗೌಣವಾಗಿ ಅದರ ಹಿಂದಿರುವ ವಿಚಾರಗಳೇ ಹೆಚ್ಚು ಸತ್ಯವಾಗುತ್ತ ಬರುತ್ತವೆ. ಹಾಗೆಯೇ ಒಂದು ಪುಸ್ತಕವನ್ನು ಓದುವಾಗ, ಸ್ಥೂಲ ಅಕ್ಷರಗಳಿಗಿಂತ, ಸೂಕ್ಷ್ಮ ವಿಚಾರಗಳೇ ಹೆಚ್ಚು ಸತ್ಯವಾಗುತ್ತವೆ. ಸಂಗೀತದಲ್ಲಿಯೂ ಸ್ಥೂಲಸ್ವರಗಳನ್ನು ಮೀರಿಹೋಗಿ, ಮನಸ್ಸು ಸೂಕ್ಷ್ಮ ಭಾವದಲ್ಲಿ ತಲ್ಲೀನವಾಗುತ್ತದೆ. ಮನುಷ್ಯನ ಸ್ಥೂಲರೂಪಕ್ಕಿಂತ ಮನುಷ್ಯತ್ವವೆಂಬ ಸೂಕ್ಷ್ಮಭಾವನೆಯೇ ಹೆಚ್ಚು ಸತ್ಯವಾಗುತ್ತದೆ.

ಈ ಎಲ್ಲ ಸ್ಥೂಲ ಸೂಕ್ಷ್ಮಗಳನ್ನು ಅರಿಯುವ ಸೂಕ್ಷ್ಮಾತಿಸೂಕ್ಷ್ಮವಾದ ಇನ್ನೊಂದು ಸತ್ಯವಿದೆ. ಅದೇ **ಸತ್ಯಸ್ಯಸತ್ಯ**. ಅದರ ಹಿನ್ನೆಲೆಯಲ್ಲಿಯೇ ಎಲ್ಲವೂ ಸತ್ಯವಾಗಿ ತೋರುತ್ತವೆ. ಒಂದು ಪರದೆಯ ಮೇಲೆ ಅನೇಕಾನೇಕ ದೃಶ್ಯಗಳು ಬಂದು ಹೋಗುತ್ತವೆ. ಅವು ತೋರಿ ಮಾಯವಾಗುವ ದೃಶ್ಯಗಳು. ಅವುಗಳಿಗೆ ನಿಜವಾದ ಸತ್ಯತೆ (ಭಾವ) ಇಲ್ಲ. ಆದರೆ, ಪರದೆ ಮಾತ್ರ ಬದಲಾಗದೆ ಯಾವಾಗಲೂ ಉಳಿಯುತ್ತದೆ. ಅದೇ ಸತ್ಯ, ಅದಕ್ಕೆ ಅಭಾವ ಇಲ್ಲ.

ವಿಕಾರಗಳಿಗೆ ಅವುಗಳು ಹುಟ್ಟುವುದಕ್ಕೆ ಮುಂಚೆ ಮತ್ತು ಅವು ನಾಶವಾದ ನಂತರ ಅಸ್ತಿತ್ವವಿಲ್ಲ (**ಜನ್ಮಪ್ರಧ್ವಂಸಾಭ್ಯಾಂ ಪ್ರಾಕ್ ಊರ್ಧ್ವಂ ಚ ಅನುಪಲಬ್ಧೇಃ**). ಮಡಕೆಯು ಮಣ್ಣಿನಿಂದ ಉತ್ಪತ್ತಿಯಾಗುವುದಕ್ಕೆ ಮೊದಲು ಇರಲಿಲ್ಲ. ಅದನ್ನು ಒಡೆದು ಹಾಕಿದ ಮೇಲೆ ಮಣ್ಣು ಉಳಿಯುತ್ತದೆಯೇ ಹೊರತು, ಮಡಕೆಯಲ್ಲ. ಇದೇ ಎಲ್ಲಾ ವಿಕಾರಗಳಿಗೂ–ನಾಮರೂಪಗಳಿಗೂ ಅನ್ವಯಿಸುತ್ತದೆ. ಆಭರಣಗಳು ಚಿನ್ನದಿಂದ ಉತ್ಪತ್ತಿಯಾಗುವುದಕ್ಕೆ ಮೊದಲಾಗಲೀ ಅವುಗಳನ್ನು ಕರಗಿಸಿದ ನಂತರವಾಗಲೀ ಇರುವುದಿಲ್ಲ. ಸಮುದ್ರದ ಅಲೆಗಳು ನೀರಿನಿಂದ ಹುಟ್ಟುವುದಕ್ಕೆ ಮೊದಲಾಗಲೀ ನೀರಿನಲ್ಲಿ ಲಯವಾದ ನಂತರವಾಗಲೀ ಇರುವುದಿಲ್ಲ. ಹಿಂದುಮುಂದಿಲ್ಲದುದು ಇಂದೂ ಇರಲಾರದು ಎನ್ನುತ್ತಾರೆ ಮಾಂಡೂಕ್ಯ ಕಾರಿಕೆಯನ್ನು ಬರೆದಿರುವ ಗೌಡಪಾದಾಚಾರ್ಯರು:

> ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।
> ವಿತಥೇಃ ಸದೃಶಾಃ ಸಂತೋಽವಿತಥಾ ಇವ ಲಕ್ಷಿತಾಃ ॥

> "ಆದಿಯಲ್ಲಿಯೂ ಅಂತ್ಯದಲ್ಲಿಯೂ ಯಾವುದು ಇಲ್ಲವೋ ಅದು ಮಧ್ಯದಲ್ಲಿಯೂ ಇಲ್ಲ. ಅವು ಆ ಸತ್ಯಗಳಿಗೆ ಸದೃಶವಾಗಿದ್ದುಕೊಂಡು, ಸತ್ಯವಾಗಿರುವಂತೆ ಕಾಣುತ್ತಿರುವುವು."[೭]

ಮಣ್ಣು, ಚಿನ್ನ ಮುಂತಾದ ಮೂಲವಸ್ತುಗಳೂ ವಿಕಾರಗಳೇ – ಅವೂ ನಾಮರೂಪಾತ್ಮಕವಾಗಿಯೇ ನಮಗೆ ಕಾಣುತ್ತವೆ. ಆದ್ದರಿಂದ 'ಹಿಂದುಮುಂದಿಲ್ಲದುದು ಇಂದೂ ಇರಲಾರದು' ಎಂಬ ನಿಯಮ ಅವುಗಳಿಗೂ ಅನ್ವಯಿಸುತ್ತದೆ. ಅವುಗಳ ಮೂಲವಸ್ತುಗಳ ಸ್ಥಿತಿಯೂ ಹಾಗೆಯೇ. ಹೀಗೆ ಎಲ್ಲ ವಿಕಾರಗಳೂ ವಿಚಾರಾಗ್ನಿಯಲ್ಲಿ ಕರಗಿಹೋಗುತ್ತವೆ – ಕರ್ಪೂರದಂತೆ ಏನೂ ಉಳಿಯುವುದೇ ಇಲ್ಲ. ವಿಚಾರ ಮಾಡುವ ಮನಸ್ಸು ಉಳಿಯುತ್ತದೆಯೇ? ಅದೂ ಚೈತನ್ಯಾಗ್ನಿಯಲ್ಲಿ ಕರಗಿಹೋಗುತ್ತದೆ.

**ಯತ್ಕಾಲತೋ ದೇಶತೋ ವಸ್ತುತೋ ಪರಿಚ್ಛಿನ್ನಂ ತದಸತ್**– "ಯಾವುದು ಕಾಲತಃ, ದೇಶತಃ ಮತ್ತು ವಸ್ತುತಃ ಸೀಮಿತವಾಗಿದೆಯೋ ಅದು ಅಸತ್" – ಎನ್ನುತ್ತಾರೆ ಶ್ರೀಶಂಕರಾಚಾರ್ಯರು. ಒಂದು ಸಮಯದಲ್ಲಿ ಹುಟ್ಟಿ ಮತ್ತೊಂದು ಸಮಯದಲ್ಲಿ ನಾಶವಾಗುವಂತಹುದು ಕಾಲತಃ ಪರಿಚ್ಛಿನ್ನವಾದುದು. ಇದು ಎಲ್ಲ ವಿಕಾರಗಳಿಗೂ ಅನ್ವಯಿಸುತ್ತದೆ. ಹಾಗೆಯೇ ಎಲ್ಲ ವಿಕಾರಗಳೂ ದೇಶದಿಂದ ಪರಿಮಿತವಾಗಿರುತ್ತವೆ. ಯಾವುದೇ ವಸ್ತುವಿಗೂ ತನ್ನ ಆಕಾರವನ್ನು ಮೀರಿದ ವ್ಯಾಪ್ತಿ ಇರುವುದಿಲ್ಲ. ನೀವು ಯಾವುದೇ ವಸ್ತುವನ್ನು ಎಷ್ಟೇ ಹಿಗ್ಗಿಸಿದರೂ ದೇಶತಃ (ಪ್ರದೇಶ ದೃಷ್ಟಿಯಿಂದ)

ಅನಂತವಾಗಲಾರದು. ಬೆಳಕು ಶಬ್ದ, ಉಷ್ಣ, ವಿವಿಧ ವಿಕಿರಣಗಳು ದೇಶದಿಂದ ಸೀಮಿತವಾಗಿಲ್ಲ. ಅವು ಎಲ್ಲೆಲ್ಲಿಯೂ ವ್ಯಾಪಿಸಿರುತ್ತವೆ. ಆದರೂ, ಅವುಗಳ ವ್ಯಾಪ್ತಿ ಅಧಿಕವಾದಷ್ಟೂ ತೀವ್ರತೆ ಕಡಮೆಯಾಗುತ್ತ ಬರುತ್ತದೆ. ಆದ್ದರಿಂದ ಅವುಗಳು ದೇಶತಃ ಅನಂತವಲ್ಲ ಎಂದು ಹೇಳಬೇಕಾಗುತ್ತದೆ. ಏಕೆಂದರೆ ತೀವ್ರತೆ ಕಡಮೆಯಾಗುತ್ತ ಬರುವುದರಿಂದ ಅವುಗಳಿಗೆಲ್ಲದರ ಪ್ರದೇಶವೂ ಇದ್ದಿರಲೇಬೇಕಾಗುತ್ತದೆ.

ಒಂದು ವೇಳೆ ವಿವಿಧ ಶಕ್ತಿಗಳು (energies) ದೇಶತಃ ಅನಂತ ಎಂದು ಪರಿಗಣಿಸಿದರೂ ಅವು ವಸ್ತುತಃ ಅನಂತವಾಗಿರಲಾರವು. ವಸ್ತುಗಳು – ಅವು ದ್ರವ್ಯವಾಗಲಿ ಶಕ್ತಿಯಾಗಲಿ – ಒಂದಕ್ಕಿಂತ ಅಧಿಕವಿದ್ದರೆ, ಒಂದು ಮತ್ತೊಂದರಿಂದ ಸೀಮಿತವಾಗಿರುತ್ತದೆ. ಒಮ್ಮೆಯೇ ನಾವು ಎರಡು ವಸ್ತುಗಳನ್ನು ಚಿಂತಿಸಲಾರೆವು – ಒಂದರ ಪ್ರಜ್ಞೆ ಮತ್ತೊಂದರ ಪ್ರಜ್ಞೆಯನ್ನು ಸೀಮಿತಗೊಳಿಸುತ್ತದೆ. "ಯಾವುದಕ್ಕೆ ಸಂಬಂಧಿಸಿದ ಬುದ್ಧಿಯು ಬದಲಾಯಿಸುತ್ತದೆಯೋ ಅದು **ಅಸತ್ (ಯದ್ವಿಷಯಾ ಬುದ್ಧಿಃ ವ್ಯಭಿಚರತಿ ತದಸತ್)**" ಎಂಬ ಆಗಲೇ ಚರ್ಚಿಸಿರುವ ನಿಯಮದ ಪ್ರಕಾರ ಎಲ್ಲ ವಿಕಾರಗಳೂ – ದ್ರವ್ಯ, ಶಕ್ತಿಗಳೆಲ್ಲವೂ – ಅಸತ್ಯವೇ ಆಗುತ್ತವೆ. ಆದ್ದರಿಂದ "ಎರಡು ಅನಂತಗಳಿರಲಾರವು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಒಂದೇ ಅನಂತ ಸತ್ಯವಿರುವುದು. ಉಳಿದೆಲ್ಲವೂ ವಿಕಾರವಾದ್ದರಿಂದ, ಬದಲಾಗುವುದರಿಂದ ಮತ್ತು ಸೀಮಿತವಾದುದರಿಂದ ಅಸತ್ಯ. ಆದರೆ, ಈ ವಿಕಾರಗಳನ್ನೂ ವೈವಿಧ್ಯಗಳನ್ನೂ ಅನುಭವಿಸುವ ಸಾಕ್ಷಿ ಚೈತನ್ಯವನ್ನು ಅಲ್ಲಗಳೆಯಲಾಗುವುದಿಲ್ಲ. "ಚೈತನ್ಯವು ದೇಶ–ಕಾಲವನ್ನು ಮೀರಿದ ಪೂರ್ಣಸತ್ಯ. ಅದೇ ನಿಜವಾದ 'ನಾನು' ಎಂಬುದರ ಸಾರ. ಚೈತನ್ಯ ಮತ್ತು ಶಕ್ತಿ ಎರಡೂ ಒಂದೇ ಎಂದು ನಮಗೆ ತಿಳಿದಿದೆ. ದೇಶ–ಕಾಲದಲ್ಲಿರುವ ಎಲ್ಲ ವಸ್ತುಗಳೂ ಚೈತನ್ಯನಿರ್ಮಿತ. ನಮ್ಮ ಸಾಮಾನ್ಯ ದೃಷ್ಟಿಗೆ ಗೋಚರಿಸುವ ಜಗತ್ತು ಅಸಂಖ್ಯ ವಿಶ್ವಗಳ ಒಂದು ಸಮೂಹ. ನಾವು ಅದರ ಒಂದು ಭಾಗ. ನಮ್ಮ ವ್ಯಕ್ತಿಭಾವವು ಪೂರ್ಣಾತ್ಮದ ಸೀಮಿತ ಅಭಿವ್ಯಕ್ತಿ."[6]

ಸ್ವಾಮಿ ವಿವೇಕಾನಂದರ ಪ್ರಕಾರ ಆ ಕೇವಲ, ನಿರಪೇಕ್ಷ ಸತ್ಯವನ್ನು ದೇಶ–ಕಾಲ–ನಿಮಿತ್ತಗಳ ಮೂಲಕ ನೋಡಿದಾಗ ಜಗತ್ತಾಗಿ ಕಾಣಿಸಿಕೊಳ್ಳುತ್ತದೆ. ಅವರು ಹೇಳುತ್ತಾರೆ:

"ಕಾಲ–ದೇಶ–ನಿಮಿತ್ತವು ಒಂದು ಗಾಜು ಇದ್ದ ಹಾಗೆ. ಅದರ ಮೂಲಕ ನಿರಪೇಕ್ಷ ಸತ್ಯವು ನೋಡಲ್ಪಡುತ್ತದೆ. ಕೆಳಗಿನ ಹಂತದಲ್ಲಿ ಅದನ್ನು ನೋಡಿದಾಗ ಅದು ಜಗತ್ತಾಗಿ ಕಾಣಿಸಿಕೊಳ್ಳುತ್ತದೆ."[7]

ಅವರು ಈ ಗಾಜನ್ನು ಮಾಯೆಯ ಆವರಣ ಎಂದು ಕರೆಯುತ್ತಾರೆ. ಅದು ತನ್ನ ವಿವಿಧ ಅಭಿವ್ಯಕ್ತಿಗಳ ಮೂಲಕ ಮನುಷ್ಯನನ್ನು ಬಂಧಿಸುತ್ತದೆ. ಈ ಆವರಣದ ದೆಸೆಯಿಂದ ಮನುಷ್ಯನು ತನ್ನನ್ನು ಪ್ರತ್ಯೇಕ ವ್ಯಕ್ತಿಯಾಗಿ ಪರಿಗಣಿಸುತ್ತಾನೆ, ಮತ್ತು ಜಗತ್ತನ್ನು ತನಗಿಂತ ಪ್ರತ್ಯೇಕವಾಗಿ ನೋಡುತ್ತಾನೆ. ಈ ಆವರಣವು ತೆಳ್ಳಗಾದಂತೆಲ್ಲ ಅವನು ತನ್ನನ್ನು ದಿವ್ಯತೆಯೊಂದಿಗೆ ಒಂದಾಗಿಸಿಕೊಳ್ಳುತ್ತಾನೆ ಮತ್ತು ಜಗತ್ತನ್ನು ದಿವ್ಯವಾಗಿ ಕಾಣುತ್ತಾನೆ. ವಿವೇಕಾನಂದರು ಹೇಳುತ್ತಾರೆ:

"ಪ್ರತಿಯೊಬ್ಬರ ವ್ಯಕ್ತಿತ್ವವನ್ನು ಗಾಜಿನ ಗೋಳಕ್ಕೆ ಹೋಲಿಸಬಹುದು. ಅವುಗಳ ಮಧ್ಯದಲ್ಲಿ ಭಗವಂತನಿಂದ ಬಂದ ಪರಿಶುದ್ಧವಾದ ಶ್ವೇತ ಜ್ಯೋತಿಯು ಹೊಳೆಯುತ್ತದೆ. ಆದರೆ ಸುತ್ತಲೂ ಇರುವ ಗಾಜು ಗಾತ್ರದಲ್ಲಿ ಹೆಚ್ಚು ಕಡಮೆ ಇರುವುದರಿಂದ, ಅದರ ಬಣ್ಣದಲ್ಲಿ ವ್ಯತ್ಯಾಸವಿರುವುದರಿಂದ, ಕಾಂತಿಯ ಆವಿರ್ಭಾವದಲ್ಲಿ ವ್ಯತ್ಯಾಸವಿದೆ. ಕೇಂದ್ರದಲ್ಲಿರುವ ಮೂಲಜ್ಯೋತಿ ಸೌಂದರ್ಯದಲ್ಲಿ ಮತ್ತು ಪರಿಪೂರ್ಣತೆಯಲ್ಲಿ ಒಂದೇ ಆಗಿದೆ. ಅವುಗಳು ಹೊರಗೆಡಹುತ್ತಿರುವ ಕಾಂತಿಯ ವ್ಯತ್ಯಾಸಕ್ಕೆ ಕಾರಣ ಮಧ್ಯವರ್ತಿಯ ಅಪೂರ್ಣತೆ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮೇಲ್ಮಟ್ಟಕ್ಕೆ ಏರುತ್ತ ಹೋದಂತೆ, ಮಧ್ಯವರ್ತಿಯು ಹೆಚ್ಚು ಹೆಚ್ಚು ಪಾರದರ್ಶಕವಾಗುತ್ತ ಬರುತ್ತದೆ."[8]

**ಆಕರಗಳು:**


೧ ಭಗವದ್ಗೀತೆ, ೨.೧೬

೨. ಭಗವದ್ಗೀತಾಭಾಷ್ಯ, ೨.೧೬

೩. ಅದೇ,

೪. ಕೃ.ಶ್ರೀ. ೬.೪೦೬

೫. ಗೌಡಪಾದ ಕಾರಿಕಾ ೨.೬

೬. *Bob Tofen*, from the foreword of 'Space-Time and Beyond'

೭. ಕೃ.ಶ್ರೀ. ೨.೬೪

೮. ಕೃ.ಶ್ರೀ. ೭.೨೯


ಒಂದೂರು. ಅಲ್ಲಿ ನಾಲ್ಕು ಜನ ಪ್ರಾಣಸ್ನೇಹಿತರು. ಅವರಲ್ಲಿ ಒಬ್ಬನಿಗೆ ತನ್ನ ಸಾವು ಸಮೀಪಿಸಿತು ಅನ್ನಿಸಿತು. ಅವನು ಉಳಿದವರನ್ನು ಕರೆದು, "ನಿಮ್ಮಲ್ಲಿ ಪ್ರತಿಯೊಬ್ಬರಿಗೂ ೨೦,೦೦೦ ರೂಪಾಯಿಗಳನ್ನು ಕೊಡುತ್ತೇನೆ. ಅದನ್ನು ನಾನು ಸತ್ತ ನಂತರ, ಶವಪೆಟ್ಟಿಗೆಯೊಳಗೆ ಹಾಕಬೇಕು. ನನ್ನ ಮರಣಾನಂತರದ ಜೀವನಕ್ಕೆ ಅದು ಉಪಯೋಗವಾಗುತ್ತದೆ." ಎಂದನು. ಅವರಿಗೆಲ್ಲರಿಗೂ ತುಂಬ ದುಃಖವಾಯಿತು. ಮರಣದ ನಂತರ ಹಣದ ಆವಶ್ಯಕತೆ ಇಲ್ಲವೆಂದು ತಿಳಿಹೇಳಿದರು; ತಮಗೆ ಹಣ ಬೇಡವೆಂದು ಹೇಳಿದರು. ಆದರೆ ಅವನು ಅದಕ್ಕೆ ಕಿವಿಗೊಡಲೇ ಇಲ್ಲ. ಬೇರೆ ದಾರಿ ಕಾಣದೆ, ಅವರು ಹಣ ತೆಗೆದುಕೊಂಡರು. ಸ್ನೇಹಿತ ಸತ್ತ ದಿನ ಅವನ ಶವದ ಸುತ್ತ ಅವರೆಲ್ಲ ದುಃಖಿಸುತ್ತ ಕುಳಿತಿದ್ದಾರೆ. ಮೊದಲನೆಯ ಸ್ನೇಹಿತ "ನಾನು ರೂ.೧೫,೦೦೦ ಶವದ ಪೆಟ್ಟಿಗೆಯೊಳಗೆ ಹಾಕಿದೆ. ದಲಿತರ ಸೇವೆಗಾಗಿ ನಾನು ಉಳಿದ ರೂ.೫೦೦೦ ಖರ್ಚು ಮಾಡಿದ್ದೇನೆ" ಎಂದ. ಎರಡನೆಯವನು, "ನಾನು ಅವನ ಹಣಕಾಸಿನ ವ್ಯವಹಾರವನ್ನೆಲ್ಲ ನೋಡಿಕೊಳ್ಳುತ್ತಿದ್ದೆ. ಎಂದೂ ಅವನಿಂದ ಸಂಬಳ ತೆಗೆದುಕೊಳ್ಳಲಿಲ್ಲ. ಆದ್ದರಿಂದ ರೂ.೧೦,೦೦೦ ಹಾಕಿದೆ" ಎಂದು ಹೇಳಿದ. ಮೂರನೆಯವನಿಗೆ ಕೋಪ ಬಂತು. "ಅವನು ನಮ್ಮ ಆತ್ಮೀಯ ಗೆಳೆಯ. ಅವನಿಗೆ ಕೊಟ್ಟ ಮಾತು ನಾವು ಉಳಿಸಿಕೊಳ್ಳಬೇಡವೇ? ಆದ್ದರಿಂದ, ಅವನಿಗೆ ಕೊಟ್ಟ ಮಾತಿನಂತೆ, ನಾನು ಪೂರಾ ರೂ.೨೦,೦೦೦ ಚೆಕ್ ಬರೆದು ಹಾಕಿಬಿಟ್ಟೆ" ಎಂದು ಹೇಳಿದ!! ಸತ್ತ ಸ್ನೇಹಿತನು ಅದನ್ನು ನಗದು ಮಾಡಿಕೊಳ್ಳದಿದ್ದರೆ, ಅದು ತನ್ನ ಜವಾಬ್ದಾರಿಯಲ್ಲ ಎಂಬ ಧೋರಣೆ ಅವನದು.

ಹಾಗೆ ನೋಡಿದರೆ, ಮೂವರು ಸ್ನೇಹಿತರೂ ತಾವಿತ್ತ ವಾಗ್ದಾನವನ್ನು ಉಳಿಸಿಕೊಳ್ಳಲಿಲ್ಲ. ದುರಾಸೆಯ ಅವರ ಮನಸ್ಸುಗಳು ಸತ್ಯವನ್ನು ಅವರ ಇಷ್ಟಗಳಿಗೆ ಅನುಸಾರವಾಗಿ, ಸೀಮಿತಗೊಳಿಸಿದವು. ಅದನ್ನು ಸಮರ್ಥಿಸಿಕೊಳ್ಳಲು ಹಲವು ಅನೈತಿಕ ವಾದಗಳು ಬೇರೆ. ಸಂಸ್ಕೃತ ಸುಭಾಷಿತವೊಂದು ಹೀಗೆ ಹೇಳುತ್ತದೆ: **"ಸತ್ಯವಂತರು ತಮ್ಮ ವಚನವನ್ನು ಕಾಪಾಡಲು, ಪ್ರಾಣವನ್ನೇ ತೆರುವರೇ ಹೊರತು, ಅದನ್ನು ಎಂದಿಗೂ ಮುರಿಯುವುದಿಲ್ಲ."**

(ಆಧಾರ: You don't have to be sick to get better; ಸಂಗ್ರಹ: ಸ್ವರ್ಣಗೌರಿ)